ಸಾರ್ವಜನಿಕ ಗ್ರಂಥಾಲಯದ ವಿಶೇಷ ತನಿಖಾ ವರದಿ

1477(2024) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ): ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು ಮತ್ತು ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 2-3 ವರ್ಷಗಳ ಹಿಂದೆ ಸಾರ್ವಜನಿಕ ಗ್ರಂಥಾಲಯ ಇಲಾಖೆ ನಿರ್ದೇಶಕರ ಕಛೇರಿಯ ತನಿಖೆ ನಡೆಸಿ ವಿಶೇಷ ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ;

ಆ. ಹಾಗಿದ್ದಲ್ಲಿ, ಸದರಿ ವಿಶೇಷ ತನಿಖಾ ವರದಿಯಲ್ಲಿ ಸಾರ್ವಜನಿಕ ಗ್ರಂಥಾಲಯದ ನಿರ್ದೇಶಕರ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿರುವುದು ನಿಜವೇ;

ಇ. ಹಾಗಿದ್ದಲ್ಲಿ, ಸದರಿ ತನಿಖಾ ವರದಿಯಲ್ಲಿನ ಗಂಭೀರ ಆರೋಪಗಳು ಯಾವುವು ಹಾಗೂ ತನಿಖಾ ವರದಿಗಾರರು ಸರ್ಕಾರಕ್ಕೆ ಮಾಡಿದ ಶಿಫಾರಸ್ಸುಗಳು ಯಾವುವು;

ಈ. ವಿಶೇಷ ತನಿಖಾ ವರದಿಯಲ್ಲಿನ ಶಿಫಾರಸ್ಸಿಗೆ ಅನುಗುಣವಾಗಿ ಗ್ರಂಥಾಲಯ ನಿರ್ದೇಶಕರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಉ. ಒಂದು ವೇಳೆ ಸರ್ಕಾರ ಈವರೆವಿಗೂ ಯಾವುದೇ ಕ್ರಮ ತೆಗೆದುಕೊಳ್ಳದಿದ್ದಲ್ಲಿ ಈಗಲಾದರೂ ಸದರಿ ನಿರ್ದೇಶಕರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಬಾಬುರಾವ್ ಚಿವ್ವಾಣ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು ಮತ್ತು ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ. ಹೌದು

ಆ. ಮತ್ತು ಇ

ಈ ವಿಶೇಷ ತನಿಖಾ ವರದಿಯಲ್ಲಿನ ಆರೋಪಗಳ ಬಗ್ಗೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರನ್ನು ಗುರುತಿಸಿ, ಆರೋಪ ಪಟ್ಟಿಗಳನ್ನು ನೀಡಲು ಸರ್ಕಾರವು ಈಗಾಗಲೇ ನಿವೃತ್ತ ನ್ಯಾಯಾಧೀಶರೊಬ್ಬರನ್ನು ನೇಮಿಸಿದೆ. ಅವರಿಂದ ಆರೋಪ ಹಾಗೂ ಆರೋಪ ಪಟ್ಟಿಯನ್ನು ಕಾಯಲಾಗುತ್ತಿದೆ.

ಈ ಮತ್ತು ಉ

ಸದರಿ ನಿವೃತ್ತ ನ್ಯಾಯಾಧೀಶರಿಂದ ಆರೋಪಗಳ ಬಗ್ಗೆ ದಾಖಲಾತಿಗಳು ಬಂದ ನಂತರ ನಿಯಮಗಳನ್ವಯ ಸಂಬಂಧಪಟ್ಟವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸುವ ಬಗ್ಗೆ ಸಂಬಂಧಿಸಿದ, ಶಿಸ್ತಿನ ಪ್ರಾಧಿಕಾರ ತೆಗೆದುಕೊಳ್ಳುತ್ತದೆ.

ಬೆಂಗಳೂರು ನಗರದ ಸಾರ್ವಜನಿಕರಿಂದ ವಸೂಲು ಮಾಡಲಾದ ಗ್ರಂಥಾಲಯ ಕರ

1478(2025) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ): ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು ಮತ್ತು ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ನಗರದ ಸಾರ್ವಜನಿಕರಿಂದ ವಸೂಲು ಮಾಡಲಾದ ಗ್ರಂಥಾಲಯ ಕರದ ಒಟ್ಟು ಮೊತ್ತವೆಷ್ಟು; (ವರ್ಷವಾರು ಮಾಹಿತಿ ಒದಗಿಸುವುದು);

ಆ. ಈ ರೀತಿ ವಸೂಲು ಮಾಡಲಾದ ಗ್ರಂಥಾಲಯ ಕರವನ್ನು ಗ್ರಂಥಾಲಯದ ಯಾವ ಯಾವ ಸೌಲಭ್ಯಕ್ಕಾಗಿ ಉಪಯೋಗ ಮಾಡಲು ಕಾನೂನಿನಲ್ಲಿ ಅವಕಾಶವಿದೆ;

ಇ. ಒಂದು ನಗರದಲ್ಲಿ ವಸೂಲಾದ ಗ್ರಂಥಾಲಯ ಕರವನ್ನು ಬೇರೆ ನಗರದ ಗ್ರಂಥಾಲಯದ ಪೀಠೋಪರಕರಣಗಳ ಖರೀದಿಗಾಗಿ ಉಪಯೋಗಿಸಲು ಕಾನೂನಿನಲ್ಲಿ ಅವಕಾಶವಿದೆಯೇ;

ಈ. ಹಾಗಿಲ್ಲದಿದ್ದಲ್ಲಿ, ಬೆಂಗಳೂರು ನಗರದಲ್ಲಿ ವಸೂಲು ಮಾಡಲಾದ ಗ್ರಂಥಾಲಯ ಕರವನ್ನು ಗುಲ್ಬರ್ಗಾ ಹಾಗೂ ರಾಯಚೂರು ನಗರಗಳ ಗ್ರಂಥಾಲಯದ ಪೀಠೋಪಕರಣಗಳ ಖರೀದಿಗಾಗಿ ಉಪಯೋಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಉ. ಕಳೆದ ಮೂರು ವರ್ಷಗಳಲ್ಲಿ ಈ ರೀತಿ ಗುಲ್ಬರ್ಗಾ ಹಾಗೂ ರಾಯಚೂರು ನಗರಗಳ ಗ್ರಂಥಾಲಯದ ಪೀಠೋಪಕರಣಗಳ ಖರೀದಿಗಾಗಿ ಉಪಯೋಗಿಸಿದ ಮೊತ್ತವೆಷ್ಟು (ವರ್ಷವಾರು ಮಾಹಿತಿ ಒದಗಿಸುವುದು);

ಊ. ಈ ರೀತಿ ಕಾನೂನಿನ ವಿರುದ್ಧ ಒಂದು ನಗರದಲ್ಲಿ ವಸೂಲಾದ ಗ್ರಂಥಾಲಯ ಕರವನ್ನು ಬೇರೆ ನಗರಗಳಲ್ಲಿ ಉಪಯೋಗಿಸಲು ಕಾರಣಗಳೇನು ಹಾಗೂ ಇದಕ್ಕೆ ಕಾರಣಕರ್ತರಾದ ಅಧಿಕಾರಿಗಳು ಯಾರು ಯಾರು.

ಋ. ಅಂತಹ ಅಧಿಕಾರಿಗಳ ವಿರುದ್ಧ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಬಾಬುರಾವ್ ಚವ್ಹಾಣ (ವಯಸ್ಕರ ಶಿಕ್ಷಣ, ಗ್ರಂಥಾಲಯಗಳು ಮತ್ತು ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ. 1999-2000 2000-01 2001-02

(ರೂ. ಲಕ್ಷಗಳಲ್ಲಿ)

230.00 475.00 625.00

ಆ. ಈ ರೀತಿ ವಸೂಲು ಮಾಡಲಾದ ಗ್ರಂಥಾಲಯ ಕರವನ್ನು ಪುಸ್ತಕ, ಪತ್ರಿಕೆ, ನಿಯತಕಾಲಿಕೆ, ಪೀಠೋಪಕರಣ, ಬಾಡಿಗೆ, ವಿದ್ಯುತ್ ನೀರು, ಶುಚಿತ್ವ, ಬೈಂಡಿಂಗ್ ಹಾಗೂ ಲೋಕೋಪಯೋಗಿ ಕೆಲಸಗಳಿಗಾಗಿ ಉಪಯೋಗ ಮಾಡಲು ಕಾನೂನಿನಲ್ಲಿ ಅವಕಾಶವಿದೆ.

ಇ. ಕರ್ನಾಟ ಸಾರ್ವಜನಿಕ ಗ್ರಂಥಾಲಯ ಕಾಯ್ದೆ 1995ರ ನಿಯಮಗಳನ್ವಯ ಆಯಾಯಾ ಗ್ರಂಥಾಲಯ ಪ್ರಾಧಿಕಾರದ ಅನುಮೋದನೆ ಪಡೆದು ಬೇರೆ ನಗರದ ಗ್ರಂಥಾಲಯಗಳಿಗೆ ಪೀಠೋಪಕರಣಗಳನ್ನು: ಪುಸ್ತಕಗಳನ್ನು ದಾನದ ರೂಪದಲ್ಲಿ ನೀಡಲು ನಿಯಮಗಳಲ್ಲಿ ಅವಕಾಶವಿದೆ.

ಈ. ಇಲ್ಲ.

ಉ. ಉದ್ಭವಿಸುವುದಿಲ್ಲ.

ಊ. ಉದ್ಭವಿಸುವುದಿಲ್ಲ.

ಋ. ಉದ್ಭವಿಸುವುದಿಲ್ಲ.

ರಾಜೀವಗಾಂಧಿ ಆಶ್ರಯ ಯೋಜನೆ

1479(2083) ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ (ಕುಂದಾಪುರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?